# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 508 |
| 02. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) |
| 03. | ಉತ್ತರಿಸುವ ದಿನಾಂಕ | : 08.12.2023 |
| 04. | ಉತ್ತರಿಸುವ ಸಚಿವರು. | : ಗೃಹ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಐದು ವರ್ಷಗಳಲ್ಲಿ ನಾಪತ್ತೆಯಾದ ಮಕ್ಕಳ ಸಂಖ್ಯೆ ಎಷ್ಟು; (ವಿವರ ನೀಡುವುದು | ರಾಜ್ಯದಲ್ಲಿ ಕಳೆದ 5 ವರ್ಷಗಳಲ್ಲಿ ವರದಿಯಾಗಿರುವ ಕಾಣೆಯಾದ, ಪತ್ತೆ ಹಚ್ಚಲಾದ ಮತ್ತು ಪತ್ತೆಗೆ ಬಾಕಿ ಇರುವ ಪ್ರಕರಣಗಳ ಅಂಕಿ-ಅಂಶಗಳು ಈ ಕೆಳಕಂಡಂತಿದೆ. (ಕೆಳಗಿನ ಕೋಷ್ಟಕ ನೋಡಿ) |

| ವರ್ಷ | ವರದಿ | | ಪತ್ತೆ | | ಪತ್ತೆಗೆ ಬಾಕಿ | |
|---|---|---|---|---|---|---|
| | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಗಂಡು ಮಕ್ಕಳು | ಹೆಣ್ಣು ಮಕ್ಕಳು | ಗಂಡು ಮಕ್ಕಳು | ಹೆಣ್ಣು ಮಕ್ಕಳು |
| 2018 | 325 | 445 | 302 | 436 | 23 | 9 |
| 2019 | 813 | 1311 | 764 | 1276 | 49 | 35 |
| 2020 | 421 | 1136 | 400 | 1099 | 21 | 37 |
| 2021 | 488 | 1630 | 460 | 1566 | 28 | 64 |
| 2022 | 745 | 1831 | 703 | 1729 | 42 | 102 |
| 2023 (ಅಕ್ಟೋಬರ್) | 731 | 1837 | 547 | 1231 | 184 | 606 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ರಾಜ್ಯದಲ್ಲಿ ಮಕ್ಕಳ ಮಾರಾಟ ಮತ್ತು ಕಳ್ಳತನದ ಪ್ರಕರಣಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಈ ಪ್ರಕರಣಗಳನ್ನು ನಿಯಂತ್ರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; | ರಾಜ್ಯದಲ್ಲಿ ಮಾನವ ಕಳ್ಳಸಾಗಾಣಿಕೆಯನ್ನು ತಡೆಗಟ್ಟುವ ನಿಟ್ಟಿನಲ್ಲಿ ಸರ್ಕಾರವು ನಿರ್ಭಯ ನಿಧಿ ಅಡಿಯಲ್ಲಿ 35 ಮಾನವ ಕಳ್ಳ ಸಾಗಾಣಿಕೆ ನಿಷೇಧ ಘಟಕಗಳನ್ನು ಸ್ಥಾಪಿಸಿರುತ್ತದೆ. ಮಕ್ಕಳ ನಾಪತ್ತೆ ಮತ್ತು ಮಾರಾಟ ಪ್ರಕರಣಗಳ ಪತ್ತೆ ಕಾರ್ಯದಲ್ಲಿ ಹೆಚ್ಚಿನ ಗಮನ ಹರಿಸಲು ಇದು ಸಹಾಯಕವಾಗಿರುತ್ತದೆ. |
| ಇ) | ನಗರ ಪ್ರದೇಶಗಳು ಹಾಗೂ ಆರ್ಥಿಕವಾಗಿ ಹಿಂದುಳಿದ ಪ್ರದೇಶಗಳಲ್ಲಿ ಬಡತನ ಇನ್ನಿತರ ಕಾರಣಗಳಿಗಾಗಿ ನಿಯಂತ್ರಿಸಲು ತೆಗೆದುಕೊಂಡ ಕ್ರಮವೇನು? | ಅನ್ವಯಿಸುವುದಿಲ್ಲ. |
| ಈ) | ಇದನ್ನು ಸಂಪೂರ್ಣ ನಿಯಂತ್ರಿಸಿ ಮಕ್ಕಳ ಭವಿಷ್ಯಕ್ಕೆ ಮತ್ತು ಸಮಾಜಕ್ಕೆ ಮಾರಕವಾಗದಂತೆ ನಿಯಂತ್ರಿಸಲು ಕೂಡಲೇ ಕ್ರಮ ಕೈಗೊಳ್ಳುವುದೇ? | ಮಕ್ಕಳ ನಾಪತ್ತೆ ಮತ್ತು ಮಾರಾಟ ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>• ಅಪಹರಣ ಪ್ರಕರಣ ವರದಿಯಾದ ಕೂಡಲೇ ಈ ಬಗ್ಗೆ ರಾಜ್ಯದ ಎಲ್ಲಾ ಠಾಣೆಗಳಿಗೆ ಪ್ರಕರಣದ ಆರೋಪಿ ಮತ್ತು ಅಪಹರಿಸಿರುವ ಮಗುವಿನ ಬಗ್ಗೆ, ಯಾವುದೇ ಸುಳಿವು ದೊರೆತರೆ ಮಾಹಿತಿ ಪಡೆದುಕೊಳ್ಳಲು ಪೋಷಕರ ಒಪ್ಪಿಗೆ ಮೇರೆಗೆ ಪತ್ರಿಕಾ ಪ್ರಕಟಣೆ, |

ದೂರದರ್ಶನ, ಆಕಾಶವಾಣಿ ಇತ್ಯಾದಿ ಮಾಧ್ಯಮಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

- ರಾಜ್ಯದ ಗಡಿ ಪ್ರದೇಶಗಳಲ್ಲಿ ಮತ್ತು ಬಸ್ ನಿಲ್ದಾಣ/ರೈಲ್ವೆ ನಿಲ್ದಾಣಗಳಲ್ಲಿ ಭಿತ್ತಿ ಪತ್ರಗಳನ್ನು/ಫೋಟೋಗಳನ್ನು ಅಂಟಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.
- ರಿಜಿನಲ್ ಪಾಸ್‌ಪೋರ್ಟ್ ಆಫೀಸ್ ರವರಿಗೆ ಯಾರಾದರೂ ನವಜಾತ ಮಕ್ಕಳಿಗೆ ಪಾಸ್ ಪೋರ್ಟ್‌ಗೆ ಅರ್ಜಿ ಸಲ್ಲಿಸಿರುವರೇ? ಎಂಬ ಬಗ್ಗೆ ಪರಿಶೀಲನೆ ಮಾಡಲಾಗುತ್ತಿದೆ.
- ಕೃತ್ಯ ನಡೆದ ಸ್ಥಳದಲ್ಲಿ ಹಾಗೂ ಸುತ್ತಾಮುತ್ತ ಲಭ್ಯವಿದ್ದ ಸಿಸಿಟಿವಿ ಕ್ಯಾಮರದ ಫುಟೇಜ್‌ಗಳನ್ನು ಪರಿಶೀಲನೆ ಮಾಡಲಾಗುತ್ತದೆ.
- ಲಭ್ಯವಿರುವ ಮಾಹಿತಿಯೊಂದಿಗೆ (ಚಹರೆ) ಟ್ರಾಕ್ ಚೈಲ್ಡ್ ತಂತ್ರಾಂಶದಲ್ಲಿ ಮಗುವಿನ ದೈಹಿಕ ಚಹರೆಯನ್ನು ಮಿಸ್ಸಿಂಗ್ ಪರ್ಸನ್ ಬ್ಯೂರೋಗೆ ಕಳುಹಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.
- ಮಾನವ ಕಳ್ಳಸಾಗಾಣಿಕೆ ಪ್ರಕರಣಗಳನ್ನು ತಡೆಗಟ್ಟಲು ಮಾನವ ಕಳ್ಳಸಾಗಾಣಿಕೆ ನಿಷೇಧ ಘಟಕ ಹಾಗೂ ಸಂಬಂಧಪಟ್ಟ ಎಸ್‌ಸಿಆರ್‌ಬಿ (ರಾಜ್ಯ ಅಪರಾಧ ದಾಖಲಾತಿ ಘಟಕ) ಮತ್ತು ಎನ್‌ಸಿಆರ್‌ಬಿ (ರಾಷ್ಟ್ರೀಯ ಅಪರಾಧ ದಾಖಲೆಗಳ ಬ್ಯೂರೋ) ಪೊಲೀಸ್ ಅಧಿಕಾರಿಗಳನ್ನು ಸಂಪರ್ಕಿಸಿ ಮಾನವ ಕಳ್ಳಸಾಗಾಣಿಕೆ ಅಪರಾಧಗಳ ಬಗ್ಗೆ ಮಾಹಿತಿ ಸಂಗ್ರಹಿಸಲಾಗುತ್ತಿದೆ.
- ಅಪಹರಣಕ್ಕೊಳಗಾದ ಮಗುವಿನ ಭಾವಚಿತ್ರಗಳ ನೋಟೀಸುಗಳನ್ನು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅಂಟಿಸುವ ಮೂಲಕ, ಸಾಮಾಜಿಕ ಜಾಲತಾಣಗಳಲ್ಲಿ, ಎಲ್ಲಾ ವರ್ಗದ ಜನತೆಯನ್ನೂ ತಲುಪುವಂತೆ ವ್ಯಾಪಕ ಪ್ರಚಾರ ನೀಡಿ ಸಾರ್ವಜನಿಕರ ಸಹಕಾರದಿಂದ ಈ ಪ್ರಕರಣದಲ್ಲಿ ಅಪಹರಣಕ್ಕೊಳಗಾದ ಮಗು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುತ್ತದೆ.
- ಶಾಪಿಂಗ್ ಮಾಲುಗಳು, ಉದ್ಯಾನವನಗಳು, ಮನರಂಜನಾ ಸ್ಥಳಗಳು, ಕ್ರೀಡಾ ಸ್ಥಳಗಳು, ಮತ್ತು ಅಪಹರಣಕ್ಕೊಳಗಾದ ಮಕ್ಕಳು ಸಾಮಾನ್ಯವಾಗಿ ಇರಬಹುದಾದ ಸ್ಥಳಗಳಲ್ಲಿ ಶೋಧನೆ ಮಾಡಿ ಅಪಹರಣಕ್ಕೊಳಗಾದ ಮಗುವನ್ನು ಮತ್ತು ಆರೋಪಿಯನ್ನು ಪತ್ತೆ ಮಾಡಲಾಗುವುದು.
- ಸರ್ಕಾರೇತರ ಎನ್.ಜಿ.ಓಗಳ ಸಹಕಾರದೊಂದಿಗೆ ಕಾಣೆಯಾದ ಮಕ್ಕಳ ಪತ್ತೆಗಾಗಿ ಶ್ರಮಿಸಲಾಗುತ್ತಿದೆ.
- ನಿರ್ಮಾಣದ ಹಂತದಲ್ಲಿರುವಂತಹ ಕಟ್ಟಡಗಳು, ಬಳಕೆಯಾಗದಂತಹ ಕಟ್ಟಡಗಳು, ಆಸ್ಪತ್ರೆಗಳು ಮತ್ತು ಔಷಧಾಲಯಗಳು, ರೈಲ್ವೆ ಪೊಲೀಸರು ಮತ್ತಿತರ ಸ್ಥಳಗಳಲ್ಲಿ ವಿಚಾರಣೆ ನಡೆಸಿ ಅವರಿಂದ ಮಾಹಿತಿಯನ್ನು ಸಂಗ್ರಹಿಸಿ ಅಪಹರಣಕ್ಕೊಳಗಾದ ಮಗುವನ್ನು ಮತ್ತು ಆರೋಪಿಯನ್ನು ಪತ್ತೆ

| | | |
|---|---|---|
| | | ಮಾಡಲಾಗುವುದು.<br><br>• ಕಾಣೆಯಾದ ಪ್ರಕರಣಗಳ ಪೈಕಿ 60 ದಿನದೊಳಗೆ ಪತ್ತೆಯಾಗದ ಪ್ರಕರಣಗಳನ್ನು ಪರಿಣಾಮಕಾರಿ ತನಿಖೆಗಾಗಿ ವಿಶೇಷ ಘಟಕವಾದ ಎಹೆಚ್‌ಟಿಯು (Anti Human Trafficking Unit) ಘಟಕಗಳಿಗೆ ವರ್ಗಾವಣೆ ಮಾಡವುದು.<br>• ಅನಾಥಾಶ್ರಮಗಳಲ್ಲಿ, ಆಶ್ರಮಗಳಲ್ಲಿ, ಆಧ್ಯಾತ್ಮಿಕ ಸ್ಥಳಗಳಲ್ಲಿ ಮತ್ತು ಬಾಲಮಂದಿರಗಳಲ್ಲಿ ಹುಡುಕುವುದು.<br>• ಲುಕ್ ಔಟ್ ನೋಟೀಸ್ ನೀಡುವುದು, ಅಕ್ಕ-ಪಕ್ಕದ ಜಿಲ್ಲೆಗಳಲ್ಲಿ ಕಾಣೆಯಾದ ಮಕ್ಕಳ ಕುರಿತು ಹುಡುಕಾಟ ನಡೆಸುವುದು.<br>• ದಕ್ಷ ಅಧಿಕಾರಿಗಳ ತಂಡವನ್ನು ನಿರ್ಮಿಸಿ ಎಲ್ಲಾ ಕಡೆ ಹುಡುಕಾಟ ನಡೆಸುವುದು, ಅಕ್ಕ-ಪಕ್ಕದ ಜಿಲ್ಲೆಗಳ ಪೋಲೀಸ್ ಠಾಣೆಗಳಲ್ಲಿ ದಾಖಲಾದ ಅಪರಿಚಿತ ಶವಗಳ UDR ಪ್ರಕರಣಗಳನ್ನು ಪರಿಶೀಲಿಸುವುದು, ಜಿಲ್ಲಾ ಅಪರಾಧ ದಾಖಲಾತಿ ವಿಭಾಗಗಳಲ್ಲಿನ ವರದಿಗಳನ್ನು ಪರಿಶೀಲಿಸುವುದು, ಪೇಪರ್ ಮತ್ತು ದೂರವಾಣಿಯಲ್ಲಿ ಕಾಣೆಯಾದ ಮಕ್ಕಳ ಭಾವಚಿತ್ರವನ್ನು ಪ್ರಸಾರ ಮಾಡುವುದು.<br>• ಪ್ರತಿ ಮಾನವ ಕಳ್ಳ ಸಾಗಾಣಿಕೆ ಘಟಕಗಳಿಗೆ ಹಿರಿಯ ಮತ್ತು ಕಿರಿಯ ಮಕ್ಕಳ ಕಲ್ಯಾಣಾಧಿಕಾರಿಗಳನ್ನು ನಿಯೋಜಿಸಿ, ಅವರುಗಳಿಗೆ ತರಬೇತಿ ನೀಡಲಾಗಿರುತ್ತದೆ.<br>• ಮಾನವ ಸಾಗಣಿಕೆ ಮಾಡುವವರ ವಿರುದ್ಧ ಬಾತ್ಮಿ ಸಂಗ್ರಹಿಸಿ ತಪ್ಪಿತಸ್ಥರ ವಿರುದ್ಧ ಕಲಂ.370, 370[ಎ] ಐಪಿಸಿ ಮತ್ತು ಇಮ್‌ಮೋರಲ್ ಟ್ರಾಫಿಕಿಂಗ್ ಪ್ರಿವೆನ್ಸ್ ಆಕ್ಟ್ (ಐ.ಟಿ.ಪಿ.ಎ) ಹಾಗೂ ಸಂಬಂಧಪಟ್ಟ ಇತರೆ ಕಾಯ್ದೆ ಮತ್ತು ಕಲಂ ರೀತ್ಯಾ ಪ್ರಕರಣಗಳನ್ನು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಲಾಗುತ್ತಿದೆ.<br>• ಮಾನವ ಕಳ್ಳ ಸಾಗಾಣಿಕೆಯ ಪ್ರಕರಣಗಳ ತನಿಖೆಯನ್ನು ಸಮರ್ಥವಾಗಿ ನಿರ್ವಹಿಸಲು ತನಿಖಾಧಿಕಾರಿಗಳಿಗಾಗಿ ನಿಧಿಷ್ಟ ಕಾರ್ಯವಿಧಾನವನ್ನು ಸಿದ್ದಪಡಿಸಿ, ಸ್ಥಾಯಿ ಆದೇಶದ ಮೂಲಕ ರಾಜ್ಯ ಎಲ್ಲಾ ಘಟಕಾಧಿಕಾರಿಗಳಿಗೆ ಕಳುಹಿಸಿಕೊಡಲಾಗಿದೆ.<br>• ಅಪರಿಚಿತ ವ್ಯಕ್ತಿಗಳ ಬಳಿ ಸಂಪರ್ಕ ಇಟ್ಟುಕೊಳ್ಳದಂತೆ, ಆಸೆ ಆಮಿಷಗಳನ್ನು ಒಡ್ಡುವ ಆಸಾಮಿಗಳ ಬಗ್ಗೆ ಮಹಿಳೆಯರಿಗೆ & ಮಕ್ಕಳಿಗೆ ಹಾಗೂ ಗ್ರಾಮಗಳಲ್ಲಿ ಸೂಕ್ತ ತಿಳುವಳಿಕೆಗಳನ್ನು ನೀಡಲಾಗಿರುತ್ತದೆ.<br>• ಅಪರಾಧ ಚಟುವಟಿಕೆಗಳಲ್ಲಿ ಹಾಗೂ ಮಕ್ಕಳ ಬಿಕ್ಷಾಟನೆಯಲ್ಲಿ ತೊಡಗಿಸಿರುವಂತಹ ಅಪರಿಚಿತ ವ್ಯಕ್ತಿಗಳು ಕಂಡು ಬಂದಲ್ಲಿ ಅಂತಹವರು ಕಂಡು ಬಂದಲ್ಲಿ ಠಾಣೆಗೆ ಮಾಹಿತಿ ನೀಡುವಂತೆ |

| | | |
|---|---|---|
| | | ಸೂಚಿಸಲಾಗಿರುತ್ತದೆ.<br>• ಮಹಿಳೆ ಮತ್ತು ಮಕ್ಕಳ ಸುರಕ್ಷತೆಗಾಗಿ ವಿವಿಧ ಹೆಸರುಗಳಡಿಯಲ್ಲಿ ವಿಶೇಷ ಪಡೆಗಳನ್ನು ರಚಿಸಿದ್ದು, ಸದರಿ ಪಡೆಯು ನಗರದ ಮತ್ತು ಜಿಲ್ಲಾ ವ್ಯಾಪ್ತಿಯ ಶಾಲಾ- ಕಾಲೇಜು, ಪಾರ್ಕ್‌ಗಳು, ಹಾಸ್ಟೆಲ್, ಪಿಜಿ, ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಮತ್ತು ಇತರೆ ಹೆಚ್ಚಾಗಿ ಮಹಿಳೆಯರು ಮತ್ತು ಮಕ್ಕಳು ಓಡಾಡುವ ಸ್ಥಳಗಳ ಪ್ರತಿದಿನ ಗಸ್ತು ಮಾಡುತ್ತಾ ಅರಿವು ಮೂಡಿಸಲಾಗುತ್ತಿದೆ.<br>• ಬಸ್ ನಿಲ್ದಾಣ, ರೈಲು ನಿಲ್ದಾಣ, ವಿಮಾಣ ನಿಲ್ದಾಣ ಮತ್ತು ಜನನಿಬಿಡ ಸ್ಥಳಗಳಲ್ಲಿ ಹಾಗೂ ಪ್ರಮುಖ ಸ್ಥಳಗಳನ್ನು ಗುರುತಿಸಿ ಸಿಸಿ ಟಿ.ವಿ ಕ್ಯಾಮರಾಗಳನ್ನು ಅಳವಡಿಸಿದ್ದು ಅವುಗಳ ಸಹಾಯದಿಂದ ಮಹಿಳೆಯರ ಮತ್ತು ಮಕ್ಕಳ ಸಾಗಾಟ ಮಾಡುವವರ ಮೇಲೆ ನಿಗಾವಹಿಸಲಾಗಿದೆ.<br>• ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿನ ಬೀಟ್ ಸಿಬ್ಬಂದಿಗಳ ಮೂಲಕ ಹಾಗೂ ಬೀಟ್ ಗ್ರೂಪ್ ಸದಸ್ಯರ ಮೂಲಕ ಮಾನವ ಕಳ್ಳಸಾಗಾಣಿಕೆ ಬಗ್ಗೆ ಸಂಬಂಧಿಸಿದಂತೆ ಮುಂಚಿತವಾಗಿ ಮಾಹಿತಿ ಸಂಗ್ರಹಿಸಿ ಸೂಕ್ತ ಮುಂಜಾಗ್ರತಾ ಕ್ರಮ ಕೈಕೊಳ್ಳುವ ವ್ಯವಸ್ಥೆ ಮಾಡಲಾಗಿದೆ. |

**ಹೆಚ್‌ಡಿ 44 ಪಿಸಿಕ್ಯೂ 2023**

(ಡಾ:ಜಿ.ಪರಮೇಶ್ವರ)
**ಗೃಹ ಸಚಿವರು**